ವಿಧಾನಸಭೆ ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆ: 3753

ವಿಧಾನಸಭಾ ಸದಸ್ಯರು : ಶ್ರೀ ಗಂಗಾಧರ್ ನಾಗೇಶ್ ಭಟ್

ಉತ್ತರಿಸುವವರು : ಶ್ರೀ ಎನ್. ಚೆಲುವರಾಯಸ್ವಾಮಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಪ್ರಶ್ನೆ	ಉತ್ತರ
1. ಉತ್ತರ ಕನ್ನಡ ಜಿಲ್ಲೆಯ ಕಾರವಾರದಲ್ಲಿರುವ ಸರ್ಕಾರಿ ಆಸ್ಪತ್ರೆಯಲ್ಲಿ ಹಾಲಿ ಕರ್ತವ್ಯನಿರ್ವಹಿಸುತ್ತಿರುವ ವೈದ್ಯರು ವೈದ್ಯೇತರ ಸಿಬ್ಬಂದಿಗಳ ಸಂಖ್ಯೆ ಎಷ್ಟು? (ವಿವರಗಳನ್ನು ನೀಡುವುದು)	ಉತ್ತರ ಕನ್ನಡ ಜಿಲ್ಲೆಯ ಕಾರವಾರ ದಲ್ಲಿರುವ ಸರ್ಕಾರಿ ಆಸ್ಪತ್ರೆಯಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರ ಸಂಖ್ಯೆ–14, ವೈದ್ಯೇತರ ಸಿಬ್ಬಂದಿಗಳ ಸಂಖ್ಯೆ–89
2. ಈ ಆಸ್ಪತ್ರೆಗೆ ಕರ್ತವ್ಯ ನಿರ್ವಹಿಸಲು ಇರುವ ವೈದ್ಯರ ಸಂಖ್ಯೆ ಎಷ್ಟು?	ಈ ಆಸ್ಪತ್ರೆಗೆ ಕರ್ತವ್ಯ ನಿರ್ವಹಿಸಲು ಇರುವ ವೈದ್ಯರ ಸಂಖ್ಯೆ 24
3. ಈ ಪೈಕಿ ಖಾಲಿ ಇರುವ ವೈದ್ಯರು, ತಜ್ಞ ವೈದ್ಯರ ಸಂಖ್ಯೆ ಎಷ್ಟು ಹಾಗು ಅವು ಯಾವುವು?	ತಜ್ಞ ವೈದ್ಯರ ಸಂಖ್ಯೆ–10 ಹೆರಿಗೆ ತಜ್ಞರ ಹುದ್ದೆ–2 ಅರೆವಳಿಕೆ ತಜ್ಞರು–1 ಇ.ಎನ್.ಟಿ.–1 ಸೈಕ್ರಿಯಾಟಿಸ್ಟ್–1 ಫಾರಿನ್‌ಸಿಕ್ ಮೆಡಿಸಿನ್–1 ಜನರಲ್ ಸರ್ಜರಿ–1 ಮೈಕ್ರೋತಜ್ಞರು–1 ಜನರಲ್ ಮೆಡಿಸನ್–1 ಕ್ಷಯರೋಗ ತಜ್ಞರು–1

ಪ್ರಶ್ನೆ	ಉತ್ತರ
4. ಯಾವಾಗಿನಿಂದ ಖಾಲಿ ಇವೆ	4 ಹುದ್ದೆಗಳು ಮೂರು ತಿಂಗಳಿನಿಂದ ಖಾಲಿ ಇರುತ್ತದೆ. ಇನ್ನುಳಿದ ಹುದ್ದೆಗಳು ಒಂದು ವರ್ಷಕ್ಕಿಂತ ಮೇಲ್ಪಟ್ಟು ಖಾಲಿ ಇರುತ್ತದೆ.
5. ಆ ಹುದ್ದೆಗಳು ಇಷ್ಟು ದಿನದಿಂದ ಖಾಲಿ ಇರುವ ಕಾರಣವೇನು?	ಸದರಿ ಹುದ್ದೆಗಳು ವಯೋನಿವೃತ್ತಿಯಿಂದ ಹಾಗೂ ವರ್ಗಾವಣೆಯಿಂದ ಖಾಲಿ ಇರುತ್ತವೆ.
6.ಯಾವಾಗ ಭರ್ತಿ ಮಾಡಿಕೊಳ್ಳಲಾಗುತ್ತದೆ	ಖಾಲಿ ಇರುವ ಹುದ್ದೆಗಳಿಗೆ ತಜ್ಞ ವೈದ್ಯರನ್ನು ಸಂದರ್ಶಕರಾಗಿ ನೇಮಕ ಮಾಡಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ.
7. ಈ ಆಸ್ಪತ್ರೆಯ ನಿರ್ವಹಣೆ, ಸುಧಾರಣೆಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು? ಪೂರ್ಣ ವಿವರ ನೀಡುವುದು	ಆಸ್ಪತ್ರೆಯು ಸ್ವಚ್ಚತೆಯ ನಿರ್ವಹಣೆಯನ್ನು ಆಸ್ಪತ್ರೆಗೆ ಮಂಜೂರಾದ ಗ್ರೂಪ್ ಡಿ ಹುದ್ದೆಯಲ್ಲಿ ಶೇ. 30 ರಷ್ಟು ಹುದ್ದೆಗಳನ್ನು ಖಾಲಿ ಇರಿಸಿ ಗುತ್ತಿಗೆ ಆಧಾರದ ಮೇಲೆ ನಾನ್ ಕ್ಲಿನಿಕಲ್ ಸೇವೆಯನ್ನು ಅಳವಡಿಸಿಕೊಳ್ಳಲಾಗಿದೆ ಔಷಧಿ ಪೂರೈಕೆಗಾಗಿ ವಾರ್ಷಿಕ ಅನುದಾನ ಒಟ್ಟು ರೂ. 30 ಲಕ್ಷ ನಿಗದಿಪಡಿಸಲಾಗಿವೆ ಸದ್ಯ ಔಷಧಿ ಪೂರೈಕೆ ಹಾಗೂ ಔಷಧಿ ದಾಸ್ತಾನು ಸಮಾಧಾನಕರವಾಗಿದೆ. ಆಸ್ಪತ್ರೆಯ ಅಭಿವೃದ್ಧಿಗಾಗಿ ಆರೋಗ್ಯ ರಕ್ಷಾ ಸಮಿತಿಯನ್ನು ರಚಿಸಲಾಗಿದೆ. ಇದು ನೋಂದಾಯಿಸುವ ಪ್ರಕ್ರಿಯೆ ಜಾರಿಯಲ್ಲಿದೆ. ಪಥ್ಯಾಹಾರ, ನೀರು, ವಿದ್ಯುತ್ ಮತ್ತು ದೂರವಾಣಿಗೆ ಯಾವುದೇ ತೊಂದರೆಯಿರುವುದಿಲ್ಲ.

ಶ್ರೀ ಗಂಗಾಧರ ನಾಗೇಶ ಭಟ್ (ಕಾರವಾರ): ಮಾನ್ಯ ಅಧ್ಯಕ್ಷರೇ, ಈ ಜಿಲ್ಲಾ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರ ಸಂಖ್ಯೆ 24 ಎಂದು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಸದ್ಯಕ್ಕೆ ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ 10 ಮಾತ್ರ ಸದರಿ ಹುದ್ದೆಗಳು ವಯೋನಿವೃತ್ತಿಯಿಂದ ಹಾಗೂ ವರ್ಗಾವಣೆಯಿಂದ ಖಾಲಿ ಇರುತ್ತವೆ ಮತ್ತು ಖಾಲಿ ಇರುವ ಹುದ್ದೆಗಳಿಗೆ ತಜ್ಞ ವೈದ್ಯರನ್ನು ಸಂದರ್ಶಕರಾಗಿ ನೇಮಕ ಮಾಡಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆಯೆಂದು ಉತ್ತರದಲ್ಲಿ ಹೇಳಿದ್ದಾರೆ. ಇದೇ ಪ್ರಶ್ನೆಯನ್ನು 4 ತಿಂಗಳ ಹಿಂದೆ ನಾನು ಕೇಳಿದ್ದಾಗ ಇದೇ ಉತ್ತರ ನನಗೆ ಕೊಟ್ಟಿದ್ದರು. ಈಗಲೂ ಇದೇ ಉತ್ತರ ಸಿಕ್ಕಿದೆ, ಮುಂದೆ ನಾನು ಇಂತಹ ಪ್ರಶ್ನೆ ಕೇಳಿದರೆ ಇಂತಹುದೇ ಉತ್ತರ ಸಿಗಬಹುದು ಎಂದು ಅನ್ನಿಸುತ್ತಿದೆ. ಇವತ್ತೂ ಕೂಡ ಅಲ್ಲಿಯ ಸ್ಥಿತಿ ನೋಡಿದರೆ ನಾಲ್ಕು ಐದು ವೈದ್ಯರಿರುತ್ತಾರೆ ಒಂದೊಂದು ಸಲ, 24 ವೈದ್ಯರು ಒಂದು ಜಾಗದಲ್ಲಿ ಕೆಲಸ ಮಾಡುವ ಕಡೆ ಕೇವಲ ನಾಲ್ಕೈದು ವೈದ್ಯರು ಕೆಲಸ ಮಾಡಿದರೆ ಅದು ಯಾವ ರೀತಿ ಆಗುವುದು ಎಂದು ನೀವು ವಿಚಾರ ಮಾಡಬಹುದು. ಯಾಕೆಂದರೆ, ಅಲ್ಲಿ ಕೆಲವರು ಆಪರೇಶನ್ ಕೋಣೆಯಲ್ಲಿರುತ್ತಾರೆ. ಕೆಲವರು ತುರ್ತುವಾರ್ಡಿನಲ್ಲಿರುತ್ತಾರೆ. ಒಂದೊಂದು ಸಲ ತುರ್ತುವಾರ್ಡಿಗೆ ನಾವು ಕರೆದೊಯ್ದರೆ ತುರ್ತುವಾರ್ಡಿನಲ್ಲಿ ವೈದ್ಯರೇ ಇರುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಿಮ್ಮ ಉತ್ತರದ ಪ್ರಕಾರ ರೋಗಿಯನ್ನು ನಾವು ಜಿಲ್ಲಾಧಿಕಾರಿಗಳ ಬಳಿ ಕರೆದೊಯ್ಯಬೇಕೋ ಅಥವಾ ಜಿಲ್ಲಾ ಆಸ್ಪತ್ರೆಗೆ ಕರೆದೊಯ್ಯಬೇಕೋ ನಮಗೆ ಗೊತ್ತಾಗುತ್ತಿಲ್ಲ. ಮುಂದಿನ ತಿಂಗಳು ಇನ್ನೊಬ್ಬ ವೈದ್ಯರು ನಿವೃತ್ತರಾಗಲಿದ್ದಾರೆ. ಆಗಲೂ ಇದೇ ರೀತಿ ಮುಂದುವರೆದರೆ ಆಗ ಅದು ಬಹುಶಃ ಆಸ್ಪತ್ರೆ ಆಸ್ಪತ್ರೆಯಾಗಿ ರುವುದಿಲ್ಲವೆಂದು ನನಗನ್ನಿಸುತ್ತಾ ಇದೆ. ಆದ್ದರಿಂದ ದಯವಿಟ್ಟು ಈಗ ಖಾಲಿ ಇರುವ ಜಾಗಗಳನ್ನು ಬೇಗ ತುಂಬಬೇಕಾಗಿ ವಿನಂತಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಇದನ್ನು ತಾವು ಓದಬೇಕು ಸಾರ್, ಒಂದು ಪೋಸ್ಟ್ ಫಾರಿನ್ ಸಿಕ್ ಮೆಡಿಸಿನ್ ಖಾಲಿ ಇದೆಯಂತೆ ಫೊರೆನ್ಸಿಕ್ ಅಲ್ಲ. ಸಚಿವರು ಕೆಳಗಡೆ ಸಹಿ ಮಾಡುವುದಿಲ್ಲವಾ? ಫಾರಿನ್ ಸಿಕ್ ಮೆಡಿಸಿನ್ ಅಂತ ಒಂದು ಪೋಸ್ಟ್ ಇಟ್ಟಿದ್ದೀರಾ ನೀವು? ಕನ್ನಡ ಕೊಲ್ಲುತ್ತಿದ್ದೀರೋ ಓದದಲೆ ಸೈನ್ ಹಾಕುತ್ತಿದ್ದೀರೋ ಅಥವಾ ಅಸೆಂಬ್ಲಿಯಲ್ಲಿ ಯಾರೂ ಓದುವುದಿಲ್ಲ ಅಂದುಕೊಂಡಿದ್ದೀರೋ. ಏನು ಸಾರ್ ಈ ಸ್ಥಿತಿ ಬಂದುಬಿಟ್ಟಿತು ನಮಗೆಲ್ಲ ಶಾಸನಸಭೆಯಲ್ಲಿ. ಕ್ಲಿಯರಾಗಿ ಬರೆದಿದ್ದೀರಿ ಫಾರಿನ್ ಸಿಕ್ ಮೆಡಿಸಿನ್–1 ಇಲಾಖೆಗೆ ಸಿಕ್ ಆಗಿದೆ.

ಶ್ರೀ ಎಸ್. ಎಸ್. ಪಾಟೀಲ್: ಮಾಧುಸ್ವಾಮಿಯವರು ಮಂತ್ರಿಯಾದರೆ ಗೊತ್ತಾಗುತ್ತದೆ ಪರಿಸ್ಥಿತಿ ಏನಾಗುತ್ತದೆ ಅನ್ನುವುದು.

ಶ್ರೀ ಎನ್. ಚೆಲುವರಾಯಸ್ವಾಮಿ: (ಮಾನ್ಯ ಆರೋಗ್ಯ ಸಚಿವರು): ಅಧ್ಯಕ್ಷರೇ, ನಮ್ಮ ಕಾರವಾರದ ಶಾಸಕರು ಅವರ ಜಿಲ್ಲಾ ಆಸ್ಪತ್ರೆ ಸಮಸ್ಯೆ ಬಗ್ಗೆ ವಿಶೇಷವಾದ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ. ಕಳೆದ ನಾಲ್ಕು ತಿಂಗಳ ಹಿಂದೆ ಅವರು ಕೇಳಿದ್ದಾಗ ಅದೇ ಉತ್ತರ ಇವತ್ತು ಬಂದಿದೆ ಅಂದಿದ್ದಾರೆ. ನಾಲ್ಕು ತಿಂಗಳಿಂದೀಚೆಗೆ ಬದಲಾವಣೆ ಆಗಿದೆ. ನಾನು ಮಂತ್ರಿಯಾಗಿ ನಾಲ್ಕು ತಿಂಗಳು ಆಗುತ್ತ ಇದೆ. ಆವತ್ತು ಜಿಲ್ಲಾ ಆಸ್ಪತ್ರೆಗೆ ಸ್ಪೆಷಲಿಸ್ಟ್‌ಗಳನ್ನು ನೇಮಿಸಿಕೊಳ್ಳುವ ಅಧಿಕಾರ ಜಿಲ್ಲಾಧಿಕಾರಿಗಳಿರಲಿಲ್ಲ. ಎಲ್ಲ ಖಾಲಿ ಜಾಗೆಗಳು ಅದೇ ರೀತಿ ಮುಂದುವರೆಯುತ್ತಿದ್ದವು. ಈಗ ಕಳೆದ ಒಂದು ತಿಂಗಳ ಹಿಂದೆ ಅವರಿಗೆ ನೇಮಕ ಮಾಡಿಕೊಳ್ಳಲು ಅವಕಾಶ ಕೊಟ್ಟಿದ್ದೇವೆ. ಸ್ಯಾಲರಿಯನ್ನು ಮೂರೂವರೆ ಸಾವಿರ ರೂ ಜಾಸ್ತಿ ಮಾಡಿದ್ದೇವೆ. ಜಿಲ್ಲಾ ಆಸ್ಪತ್ರೆಯಲ್ಲಿ ಜನರಲ್ ಮೆಡಿಕಲ್ ಆಫೀಸರನ್ನು ತಗೊಳ್ಳಲು ಅವಕಾಶ ಇರಲಿಲ್ಲ. ಸ್ಪೆಷಲಿಸ್ಟ್ ಮಾತ್ರ ಇರಬೇಕಾಗಿತ್ತು ಇದೆಲ್ಲ ಸಮಸ್ಯೆಯನ್ನು ಅರ್ಥ ಮಾಡಿಕೊಂಡು ಕ್ಯಾಶುಯಾಲ್ಟಿ ಮತ್ತು ಡ್ಯೂಟಿ ಮೆಡಿಕಲ್ ಡಾಕ್ಟರುಗಳಿಗೆ ಕೆಲಸ ಮಾಡಲು ಅವಕಾಶ ಇರುವುದರಿಂದ ಜನರಲ್ ಆಸ್ಪತ್ರೆಯಲ್ಲಿ ನಾಲ್ಕು ಐದು ಜನರಲ್ ಆಸ್ಪತ್ರೆಯಲ್ಲಿ ಜನರಲ್ ಮೆಡಿಕಲ್ ಡಾಕ್ಟರುಗಳನ್ನು ಮಾಡಿಕೊಳ್ಳಲಿಕ್ಕೆ ಅವಕಾಶ ಮಾಡಿದ್ದೇವೆ. ಇವೆಲ್ಲ ಬದಲಾವಣೆಯಿಂದ ಸ್ವಲ್ಪ ಮಟ್ಟಿಗೆ ಈ ಸಮಸ್ಯೆ ಬಗೆಹರಿಯುತ್ತದೆ ಒಂದು, ಸ್ಯಾಲರಿ ಜಾಸ್ತಿ ಮಾಡಿದ್ದೇವೆ. ನಾವು ಪರ್ಮನೆಂಟಾಗಿ ಡಾಕ್ಟರುಗಳನ್ನು ತಗೊಳ್ಳುವವರೆಗೂ ಯಾವುದೆ ತರಹದ ನೇಮಕಾತಿ ಮಾಡಿಕೊಳ್ಳಲು ಜಿಲ್ಲಾ ಆಸ್ಪತ್ರೆಗೆ ಆಗುತ್ತಿರಲಿಲ್ಲ. ಕಾಂಟ್ರಾಕ್ಟ್ ಬೇಸಿಸ್ ಇವತ್ತು ತಾಲೂಕು ಮತ್ತು ಪಿಎಚ್‌ಸಿಗಳಿಗೆ ಮಾತ್ರ ಇತ್ತು. ಜಿಲ್ಲಾ ಆಸ್ಪತ್ರೆಗಳಿಗೆ ಸ್ಪೆಶಲಿಸ್ಟ್ ಮತ್ತು ಜನರಲ್ ಮೆಡಿಕಲ್ ಆಫೀಸರ್‌ಗಳನ್ನು ನೇಮಕ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅವಕಾಶ ಕೊಟ್ಟಿದ್ದೇವೆ. ಸ್ಯಾಲರಿ ಜಾಸ್ತಿ ಮಾಡಿದ್ದೇವೆ. ಇವೆಲ್ಲ ಕಾರಣದಿಂದ ಸ್ವಲ್ಪ ಉತ್ತಮವಾದ ಪರಿಸ್ಥಿತಿ ಆಗುತ್ತದೆ. ಏಪ್ರಿಲ್ ನಲ್ಲಿ ಇಡೀ ರಾಜ್ಯದಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳು ನೇಮಕಾತಿ ಪ್ರಕ್ರಿಯೆ ಮಾಡಲು ನಾವು ಈಗಾಗಲೇ ಆದೇಶ ಕೊಟ್ಟಿದ್ದೇವೆ. ಮತ್ತೊಂದು ಅವರಿಗೆ ಸೂಚನೆ ಕೊಡುತ್ತೇವೆ. ಜೊತೆಗೆ ಸರ್ಕಾರದಿಂದ ನೇರ ವಿಶೇಷ ನೇಮಕಾತಿ ಮಾಡಬೇಕೆಂದು ಈಗಾಗಲೇ ಪ್ರಸ್ತಾವನೆ ಇರುವುದರಿಂದ ಅದರಲ್ಲೂ ಸ್ವಲ್ಪ ಸಮಸ್ಯೆ ಬಗೆಹರಿಯುತ್ತದೆ. ಕನಿಷ್ಠ ನಿಮ್ಮ ಇವತ್ತಿನ ಕಾಳಜಿ ಅದೇ ರೀತಿ ಮುಂದುವರೆಯಲು ನಾವು ಬಿಡುವುದಿಲ್ಲ. ನಿಮ್ಮ ಸಮಸ್ಯೆಗೆ ಸರ್ಕಾರ ಪರಿಹಾರ ಕೊಡುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಕಾರವಾರ ಆಸ್ಪತ್ರೆ ಜಿಲ್ಲಾ ಆಸ್ಪತ್ರೆ ಬಹಳ

ಹದಗೆಟ್ಟು ಹೋಗಿದೆ. ಹಿಂದಿನ ಲೋಕಸಭಾ ಸದಸ್ಯರು ಸರ್ಕಾರದ ವಿರುದ್ಧವೇ ಧರಣಿ ಮಾಡುತ್ತೇನೆ ಅಂತ ಪ್ರತಿಭಟನೆ ಮಾಡಿದ್ದರು. ಹಾಗಾಗಿ ತಾವು ದಯವಿಟ್ಟು ಗಂಭೀರತೆ ಅರ್ಥ ಮಾಡಿಕೊಂಡು ಸ್ಪಂದಿಸಬೇಕು.

ಶ್ರೀ ಎನ್. ಚಲುವರಾಯಸ್ವಾಮಿ: ಆ ಗಂಭೀರತೆ ಅರ್ಥ ಮಾಡಿಕೊಂಡೇ ಕಾನೂನಿನಲ್ಲಿ ಇವೆಲ್ಲ ಸ್ವಲ್ಪ ಸಡಿಲ ಮಾಡಿ ಏನಾದರೂ ಮಾಡಬೇಕು ಅಂತ ಪ್ರಯತ್ನ ಮಾಡುತ್ತಿದ್ದೇವೆ. ಕಳೆದ ಒಂದು ತಿಂಗಳಲ್ಲಿ ಇವೆಲ್ಲ ಸಮಸ್ಯೆಗಳನ್ನು ಕೇಳಿದ್ದೇವೆ, ಇನ್ನೂ ಹೆಚ್ಚಿನ ಆಸಕ್ತಿ ವಹಿಸುತ್ತೇವೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 3490

ಸದಸ್ಯರ ಹೆಸರು: ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್)

ಉತ್ತರಿಸುವವರು: ಡಾ. ಹೆಚ್.ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಪ್ರಶ್ನೆ	ಉತ್ತರ
ಅ) ರಾಜ್ಯದಲ್ಲಿರುವ ಯಾವ ಯಾವ ಜಿಲ್ಲ ಪಂಚಾಯತ್ ಗಳಲ್ಲಿ ಹಣ ದುರುಪಯೋಗ, ಅಧಿಕಾರ ದುರುಪಯೋಗ ಹಾಗೂ ಕಾನೂನು ಬಾಹಿರ ಚಟುವಟಿಕೆಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಪ್ರಕರಣವಾರು ಮಾಹಿತಿ ಒದಗಿಸುವುದು)	–ಹೌದು– ಪ್ರಕರಣವಾರು ಮಾಹಿತಿಯನ್ನು ಅನುಬಂಧ–1 ಮತ್ತು 2 ರಲ್ಲಿ ಲಗತ್ತಿಸಿದೆ.
ಆ) ಹಾಗಿದ್ದರೆ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಆಪಾದಿತರೆಂದು ಕಂಡುಬಂದ ಸಂಬಂಧಿಸಿದ ಅಧಿಕಾರಿ/ನೌಕರರ ವಿರುದ್ಧ ಕ.ನಾ.ಸೇ (ವ.ನಿ.ಮ) ನಿಯಮಾವಳಿ 1957ರ ನಿಯಮಗಳನ್ವಯ ಶಿಸ್ತುಕ್ರಮ ಕೈಗೊಳ್ಳಲಾಗುತ್ತಿದೆ/ಕೈಗೊಳ್ಳಲಾಗಿದೆ. ಮತ್ತು ಹಣ ದುರುಪಯೋಗಕ್ಕೆ ಒಳಗಾದವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಲಾಗಿದೆ. (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)